ಇರುವುದು ಕಂಡು ಬಂದಿರುತ್ತದೆ.

ಆ) ಚಾಮರಾಜನಗರ ಜಿಲ್ಲೆಯಲ್ಲಿ ಒಟ್ಟು 9572 ಸಂಖ್ಯೆಯ ಅನಧಿಕೃತ ನೀರಾವರಿ ಪಂಪುಸೆಟ್ಟುಗಳಿರುವುದು ಕಂಡು ಬಂದಿರುತ್ತದೆ.

ಚಾಮರಾಜನಗರ ಜಿಲ್ಲೆಯಲ್ಲಿರುವ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಹಾಗೂ ಸಕ್ರಮಗೊಳಿಸಲಾದ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ತಾಲ್ಲೂಕು | ಗುರುತಿಸಲಾದ ಅನಧಿಕೃತ ಪಂಪುಸೆಟ್ಟುಗಳ ಸಂಖ್ಯೆ | ಸಕ್ರಮಗೊಳಿಸಲಾದ ಅನಧಿಕೃತ ನೀರಾವರಿ ಪಂಪುಸೆಟ್ಟುಗಳ ಸಂಖ್ಯೆ |
|---|---|---|---|
| 1. | ಚಾಮರಾಜನಗರ | 2227 | 668 |
| 2. | ಗುಂಡ್ಲುಪೇಟೆ | 4100 | 1039 |
| 3. | ಕೊಳ್ಳೇಗಾಲ | 3135 | 576 |
| 4. | ಯಳಂದೂರು | 110 | 10 |
| | ಒಟ್ಟು | **9572** | **2293** |

## ಬಸ್‌ಗಳ ವ್ಯವಸ್ಥೆ

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 181 (311)

ಸದಸ್ಯರ ಹೆಸರು : ಶ್ರೀ ಮಾರಿಹಾಳ್ ಸುರೇಶ್ ಶಿವರುದ್ರಪ್ಪ (ಕಿತ್ತೂರು)

ಉತ್ತರಿಸುವ ಸಚಿವರು : ಶ್ರೀ ಆರ್. ಅಶೋಕ್ (ಮಾನ್ಯ ಗೃಹ ಮತ್ತು ಸಾರಿಗೆ ಸಚಿವರು)

**ಪ್ರಶ್ನೆಗಳು:–**

ಅ) ಬೆಳಗಾವಿ ಜಿಲ್ಲೆಯಲ್ಲಿ ಅನರ್ಹಗೊಂಡ ಬಸ್‌ಗಳ ಸಂಖ್ಯೆ ಎಷ್ಟು? (ಘಟಕವಾರು ವಿವರ ನೀಡುವುದು)

ಆ) ಬೈಲಹೊಂಗಲ ಡಿಪೋದಲ್ಲಿ ಹಳೆಯ ಹಾಗೂ ಅನರ್ಹಗೊಂಡ ಬಸ್ಸುಗಳೇ ಹೆಚ್ಚಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಹಾಗಾದರೆ ಬೈಲಹೊಂಗಲ ಡಿಪೋಗೆ ಹೊಸ ಬಸ್ಸುಗಳನ್ನು ಒದಗಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

**ಉತ್ತರಗಳು:–**

ಅ) ಬೆಳಗಾವಿ ಜಿಲ್ಲೆ ವ್ಯಾಪ್ತಿಯಲ್ಲಿ ಬರುವ ಬೆಳಗಾವಿ ಹಾಗೂ ಚಿಕ್ಕೋಡಿ ವಿಭಾಗಗಳಲ್ಲಿ ಪ್ರಸಕ್ತ ಸಾಲಿನಲ್ಲಿ ಇದುವರೆಗೂ (ದಿ. 28.01.2011 ರವರೆಗೆ) 181 ಹಳೆಯ ವಾಹನಗಳನ್ನು ಅನರ್ಹಗೊಳಿಸಿದೆ (ನಿರುಪಯುಕ್ತಗೊಳಿಸಿದೆ) ಘಟಕವಾರು ವಿವರ ಈ ಕೆಳಗಿನಂತಿದೆ.

| ಕ್ರ. ಸಂ. | ಬೆಳಗಾವಿ ವಿಭಾಗದ ಘಟಕಗಳು | ನಿರುಪಯುಕ್ತಗೊಳಿಸಲಾದ ವಾಹನಗಳು | ಚಿಕ್ಕೋಡಿ ವಿಭಾಗದ ಘಟಕಗಳು | ನಿರುಪಯುಕ್ತಗೊಳಿಸಲಾದ ವಾಹನಗಳು |
|---|---|---|---|---|
| 1. | ಬೆಳಗಾವಿ–1 | 2 | ಚಿಕ್ಕೋಡಿ | 24 |
| 2. | ಬೆಳಗಾವಿ–2 | 29 | ಸಂಕೇಶ್ವರ | 17 |
| 3. | ಬೆಳಗಾವಿ–3 | 14 | ಗೋಕಾಕ | 18 |
| 4. | ಬೈಲಹೊಂಗಲ | 16 | ನಿಪ್ಪಾಣಿ | 15 |
| 5. | ಸವದತ್ತಿ | 12 | ರಾಯಭಾಗ | 13 |
| 6. | ರಾಮದುರ್ಗ | 7 | ಅಥಣಿ | 9 |
| 7. | ಖಾನಾಪೂರ | 5 | – | – |
| | ಒಟ್ಟು | **85** | ಒಟ್ಟು | **96** |

ಆ) ಬೈಲಹೊಂಗಲ ಘಟಕದಲ್ಲಿ ಒಟ್ಟು 114 ವಾಹನಗಳಿದ್ದು, ಅವುಗಳಲ್ಲಿ 2 ವಾಹನಗಳು ಮಾತ್ರ 8.5 ಲಕ್ಷಗಳಿಗಿಂತ ಹೆಚ್ಚಿನ ಕಿ.ಮೀ ಕ್ರಮಿಸಿರುತ್ತವೆ. ಅನರ್ಹಗೊಂಡ ಯಾವುದೇ ವಾಹನಗಳು ಘಟಕದಲ್ಲಿ ಇರುವುದಿಲ್ಲ. ಸದರಿ ಎರಡು ವಾಹನಗಳು ಮುಂಬರುವ ದಿನಗಳಲ್ಲಿ ನಿರುಪಯುಕ್ತಗೊಳಿಸಿ ಹೊಸ ವಾಹನಗಳನ್ನು ಒದಗಿಸಲಾಗುವುದು.

ಇ) ಪ್ರಸಕ್ತ ಸಾಲಿನಲ್ಲಿ ಬೈಲಹೊಂಗಲ ಘಟಕಕ್ಕೆ ಈಗಾಗಲೇ 11 ಹೊಸ ವಾಹನಗಳನ್ನು ಒದಗಿಸಲಾಗಿದ್ದು, ಯೋಜನೆಯಂತೆ ಸದರಿ ಘಟಕಕ್ಕೆ ಹಂತ ಹಂತವಾಗಿ ಹೊಸ ವಾಹನಗಳನ್ನು ಒದಗಿಸಲಾಗುವುದು.